ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1458
2	ಸದಸ್ಯರ ಹೆಸರು	:	ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	10-03-2022
4	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಿ.ಟಿ.ಎಂ ಕ್ಷೇತ್ರದ ವ್ಯಾಪ್ತಿಯಲ್ಲಿ ಈಜಿಪುರದಿಂದ ಅಗರದವರೆಗೆ ನೂತನ ರಸ್ತೆಯನ್ನು ನಿರ್ಮಾಣ ಮಾಡಲು ಸರ್ಕಾರ ನೀಡಿರುವ ಅನುದಾನವೆಷ್ಟು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಿ.ಟಿ.ಎಂ ಕ್ಷೇತ್ರದ ವ್ಯಾಪ್ತಿಯಲ್ಲಿ ಈಜಿಪುರದಿಂದ ಅಗರದವರೆಗೆ ನೂತನ ರಸ್ತೆಯನ್ನು ನಿರ್ಮಾಣ ಮಾಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20.09.2019ರ ಅನುಬಂಧ-10ರ ಕ್ರಿಯಾ ಯೋಜನಾ ಪಟ್ಟಿಯ ಕ್ರಮ ಸಂಖ್ಯೆ: 01ರ "Formation of road as per Master Plan 2015 (24 mtr) from Ejipura Inner ring road to Sarjapura main road" ಕಾಮಗಾರಿಗೆ ಮಾನ್ಯ "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ರೂ.30.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ.
ಆ	ಕೋರಮಂಗಲದ ಈಜಿಪುರ ಮತ್ತು ಸರ್ಜಾಪುರ ರಸ್ತೆಯಲ್ಲಿನ ಮೇಲುಸೇತುವೆ ನಿರ್ಮಾಣದ ಕಾಮಗಾರಿಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ ಹಾಗೂ ನಿರ್ಮಾಣದ ಖರ್ಚು ಎಷ್ಟು ಮತ್ತು ಅವಧಿಯ ನಿಯಮಗಳೇನು?	ಅ) ಕೋರಮಂಗಲ ಈಜಿಪುರ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಮೆ॥ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ಸ್ ಲಿ., ಸಂಸ್ಥೆ ರವರಿಗೆ ನೀಡಲಾಗಿದೆ. ಆ) ಸದರಿ ಕಾಮಗಾರಿಯ ಅಂದಾಜು ವೆಚ್ಚ ರೂ.204.00 ಕೋಟಿಗಳಾಗಿರುತ್ತದೆ. ಇ) ಕೋರಮಂಗಲ ಈಜಿಪುರ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕಾರ್ಯಾದೇಶವನ್ನು ದಿನಾಂಕ: 04.05.2017 ರಂದು ನೀಡಲಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 30 ತಿಂಗಳುಗಳ ಕಾಲಾವಧಿಯನ್ನು ನಿಗಧಿಪಡಿಸಲಾಗಿರುತ್ತದೆ. ಈ) ಸದರಿ ಕಾಮಗಾರಿಯನ್ನು ಗುತ್ತಿಗೆದಾರರು ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸದ ಕಾರಣ ಸದರಿ ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಿ ಆದೇಶಿಸಲಾಗಿದೆ.

ಸಂಖ್ಯೆ: ನಅಇ 105 ಎಂಎನ್‌ವೈ 2022 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ